ದಿನಾಂಕಃ 08.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ 1ನೇ ಪ್ರತಿವಾದಿಯರ ಪರ ಶ್ರೀ.ವಿ.ವಿ.ಕೆ ವಕೀಲರಿಂದಃ**

ಕಿತ್ತೂರನಲ್ಲಿರುವ ಮನೆ ನಂಬರ 778 ನೇದ್ದು ನನ್ನ ಹೆಸರಿಗೆ ದಾಖಲು ಇರುತ್ತದೆಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಸನ್ 1993 ರಲ್ಲಿ ಆದ ಪಾಲು ವಾಟ್ನಿಯಂತೆ ನನ್ನ ಪಾಲಿಗೆ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸದರಿ ಆಸ್ತಿಯು ನಮ್ಮ ತಂದೆಯ ಹೆಸರಿನಲ್ಲಿ ಇದ್ದು, ಅದನ್ನು ನಮ್ಮ ತಂದೆ ತನ್ನ ಸಹೋದರರ ಮಕ್ಕಳಿಗೆ ಬಿಟ್ಟುಕೊಟ್ಟಿರುತ್ತಾರೆ. ಯಾವ ರೀತಿ ಸದರಿ ಆಸ್ತಿಯನ್ನು ಬಿಟ್ಟು ಕೊಟ್ಟಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ. ನಾನು ಆ ಬಗ್ಗೆ ಚೌಕಾಸಿ ಮಾಡಲಾಗಿ ಆಸ್ತಿಯನ್ನು ಬಿಟ್ಟುಕೊಟ್ಟಿರುವ ಬಗ್ಗೆ ಮಾತ್ರ ಗೊತ್ತಾಗಿದ್ದು, ಯಾವ ರೀತಿ ಬಿಟ್ಟುಕೊಟ್ಟಿರುತ್ತಾರೆಂದು ನನಗೆ ಮಾಹಿತಿ ಇಲ್ಲ. ಸುವರ್ಣ ಭೋಜನಾಲಯವು ಪ್ರಸ್ತುತ 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ ದಾಖಲು ಇರುತ್ತದೆಂದರೆ ಸರಿಯಲ್ಲ. ಸದರಿ ಸುವರ್ಣ ಭೋಜನಾಲಯವು ಸಿ ಟಿ ಎಸ್ ನಂಬರ 3294, 3295 ಮತ್ತು 3296 ನೇದ್ದರ ಆಸ್ತಿಗಳಲ್ಲಿ ಇರುತ್ತದೆಂದರೆ ನಿಜ. ಸದರಿ ಆಸ್ತಿಗಳಲ್ಲಿ ಪಶ್ಚಿಮ ಭಾಗಕ್ಕೆ ಪ್ರತಿವಾದಿ 1 ರವರು ಮೂರು ಮಹಡಿಯ ಲಾಡ್ಜ ಅನ್ನು ಕಟ್ಟಿಸಿರುತ್ತಾರೆಂದರೆ ಸಾಕ್ಷಿಯು 1 ನೇ ಪ್ರತಿವಾದಿ ನಡೆಸುತ್ತಿದ್ದು, ಆದರೆ ನಮ್ಮೆಲ್ಲರಿಗೂ ಪಾಲು ಇರುತ್ತದೆಂದು ನುಡಿಯುತ್ತಾರೆ. ಸದರಿ ಸುವರ್ಣ ಭೋಜನಾಲಯವು ಪ್ರಸ್ತುತ ಚಾಲ್ತಿಯಲ್ಲಿರುವುದಿಲ್ಲ ಎಂದರೆ ನಿಜ. ಲಾಡ್ಜ ಸಹ ಚಾಲ್ತಿಯಲ್ಲಿರುವುದಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ದಿ.07.06.1993 ರಂದು ಆದ ವಾಟ್ನಿ ಪತ್ರವನ್ನು ತೋರಿಸಿ ಅದರಲ್ಲಿ ತನ್ನ ಸಹಿಯನ್ನು ಗುರುತಿಸಲು ಕೇಳಲಾಗಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಮೂಖಾಭಿಲೇಯಾಗಿ ನಿಡಿ1 ಎಂದು,

ಸಾಕ್ಷಿಯ ಸಹಿಯನ್ನು ನಿಡಿ1(ಎ) ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ನಾನು ವಾಟ್ನಿ ಪತ್ರಕ್ಕೆ ಯಾವ ಕಾಲಕ್ಕೂ ಸಹಿ ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ1 ರಲ್ಲಿರುವ ಸಂಗತಿಗಳನ್ನು ಓದಿ ತಿಳಿದುಕೊಂಡು ಸಹಿ ಹಾಕಿರುತ್ತೇನೆಂದರೆ ಸಾಕ್ಷಿಯು ಆ ಸಮಯದಲ್ಲಿ ನ್ಯಾಯಾಲಯದಲ್ಲಿ ನನ್ನ ವಿಚ್ಚೇಧನಾ ಪ್ರಕರಣ ಚಾಲ್ತಿಯಲ್ಲಿದ್ದು, 1 ಮತ್ತು 2 ನೇ ಪ್ರತಿವಾದಿಯರು ಖಾಲಿ ಬಾಂಡ್ ಪೇಪರ ಮೇಲೆ ಸಹಿಯನ್ನು ಪಡೆದಿರುತ್ತಾರೆಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ಖಾಲಿ ಬಾಂಡ್ ಪೇಪರ ಮೇಲೆ ನನ್ನ ಸಹಿ ಪಡೆದು ಖೊಟ್ಟಿಯಾಗಿ ವಾಟ್ನಿ ಪತ್ರವನ್ನು ತಯಾರಿಸಿಕೊಂಡಿರುತ್ತಾರೆಂದು ನಾನು ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ಆ ಬಗ್ಗೆ ವಕೀಲರಿಗೆ ಮಾಹಿತಿ ನೀಡಿರುತ್ತೀರಾ? ಎಂದರೆ ಸಾಕ್ಷಿಯು ಸದರಿ ಪ್ರಕರಣವನ್ನು ದಾಖಲಿಸಿದ ನಂತರ ಸದರಿ ವಾಟ್ನಿ ಪತ್ರದ ಬಗ್ಗೆ ನನಗೆ ಗೊತ್ತಾಗಿದ್ದು, ಅದನ್ನು ವಕೀಲರಿಗೆ ತಿಳಿಸಿರುತ್ತೇನೆಂದು ನುಡಿಯುತ್ತಾರೆ. ನಿಡಿ1 ರಂತೆ ಆದ ವಾಟ್ನಿ ಪತ್ರದ ಆಧಾರದ ಮೇಲೆ ನನಗೆ ಸರ್ವೆ ನಂಬರ 207/2 ನೇದ್ದರಲ್ಲಿರುವ ಪ್ಲಾಟ ನಂಬರ 28 ನೇದ್ದು ನನ್ನಪಾಲಿಗೆ ಬಂದಿರುತ್ತದೆಂದರೆ ಸರಿಯಲ್ಲ. ನಿಡಿ1 ನ್ನು ಖೊಟ್ಟಿಯಾಗಿ ತಯಾರಿಸಿಕೊಂಡಿರುತ್ತಾರೆಂದು ವಾದ ಪತ್ರದಲ್ಲಿ ಹೇಳಿ ಬರೆಸಲು ತೊಂದರೆ ಇತ್ತಾ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿರಲಿಲ್ಲ, ಈಗ ಗೊತ್ತಾಗಿರುತ್ತದೆಂದು ನುಡಿಯುತ್ತಾರೆ. ನಿಡಿ1 ರಲ್ಲಿ ನನ್ನ ತಂದೆ, ತಾಯಿ ಹಾಗೂ ನನ್ನ ಸಹೋದರರ ಸಹಿಗಳು ಇರುತ್ತವೆ ಎಂದರೆ ಸಾಕ್ಷಿಯು ನನ್ನ ತಂದೆ ಸಾಯಿಯ ಸಹಿಗಳು ಇರುತ್ತವೆ ಆದರೆ ನಾನು ಸದರಿ ನಿಡಿ 1 ಕ್ಕೆ ಸಹಿ ಹಾಕುವ ಸಮಯದಲ್ಲಿ ಯಾರೂ ಸಹಿ ಮಾಡಿರಲಿಲ್ಲ. ಖಾಲಿ ಬಾಂಡ್ ಪೇಪರ ಮೇಲೆ ಸಹಿ ಪಡೆದಿರುತ್ತಾರೆಂದು ನುಡಿಯತ್ತಾರೆ. ಸಾಕ್ಷಿ ನಿಡಿ 1 ರಲ್ಲಿರುವ ತನ್ನ ತಂದೆ ಹಾಗೂ ತನ್ನ ತಾಯಿಯ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ವಾದಿ

ಪರ ವಕೀಲರ ತಕರಾರಿಗೆ ಒಳಪಟ್ಟು ನಿಡಿ1(ಬಿ) ಹಾಗೂ ನಿಡಿ1(ಸಿ) ಎಂದು ಗುರುತಿಸಲಾಯಿತು. ಸದರಿ ನಿಡಿ 1 ನ್ನು ಎಮ್ ಆರ್ ಹಿರೇಮಠರವರು ಬರೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ನಿಡಿ 1 ನ್ನು ನನ್ನ ಸಮಕ್ಷಮ ಬರೆದು ಓದಿ ಹೇಳಿದ ನಂತರ ಅದಕ್ಕೆ ನಾನು ಸಹಿ ಹಾಕಿರುತ್ತೇನೆಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಈಗ ಖಾಲಿ ಬಾಂಡ ಪೇಪರ ಮೇಲೆ ನನ್ನ ಸಹಿ ಪಡೆದಿರುತ್ತಾರೆಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ನಿಡಿ1 ರ ಕುರಿತು ನಾನು ಸಿ ಟಿ ಸರ್ವೆಯರ್ ಅಧಿಕಾರಿಗಳ ಮುಂದೆ ಜವಾಬನ್ನು ಸಹ ನೀಡಿರುತ್ತೇನೆಂದರೆ ಸರಿಯಲ್ಲ. ಆದ್ದರಿಂದ ಸದರಿ ಅಧಿಕಾರಿಗಳು ನಿಡಿ1 ರಂತೆ ಅವರವರ ಪಾಲಿಗೆ ಬಂದ ಆಸ್ತಿಗಳನ್ನು ಅವರ ಹೆಸರಿಗೆ ದಾಖಲಿಸಿರುತ್ತಾರೆಂದರೆ ಸರಿಯಲ್ಲ. ಸದರಿ ನಿಡಿ 1 ರಂತೆ ಅವರವರ ಹೆಸರಿಗೆ ಆಸ್ತಿಗಳು ದಾಖಲಾದ ನಂತರ ಅವರು ತಮ್ಮ ತಮ್ಮ ಆಸ್ತಿಯ ಮೇಲೆ ಬ್ಯಾಂಕಿನಿಂದ ಸಾಲವನ್ನು ಪಡೆದು ಉದ್ಯೋಗ ಮಾಡುತ್ತಾ ಬಂದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಕಂದಾಯ ಅಧಿಕಾರಿಗಳ ಮುಂದೆಯೂ ಸಹ ನಿಡಿ 1 ರ ಕುರಿತು ಜವಾಬನ್ನು ನೀಡಿದ್ದರಿಂದ ಸದರಿ ಆಸ್ತಿಗಳಿಗೆ ಸಂಬಂಧಿಸಿದಂತೆ ಪಾಲು ವಾಟ್ನಿ ಪ್ರಕಾರ ಹೆಸರುಗಳನ್ನು ದಾಖಲಿಸಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆ ಬದುಕಿದ್ದಾಗಲೇ ನಿಡಿ 1 ರಂತೆ ಪಾಲು ವಾಟ್ನಿ ಮಾಡಿಕೊಂಡಿದ್ದು, ನನ್ನ ಪಾಲಿಗೆ ಬರಬೇಕಾದ ಆಸ್ತಿಯನ್ನು ಕೊಟ್ಟಿದ್ದರೂ ಸಹ ಪ್ರತಿವಾದಿಯರಿಗೆ ವಿನಾಕಾರಣ ತೊಂದರೆ ಕೊಡುವ ಉದ್ದೇಶದಿಂದ ಖೊಟ್ಟಿ ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸನ್ 1993 ರಲ್ಲಿ ನನ್ನ ತಂದೆಯ ಹೆಸರಿಗೆ ಬ್ಯಾಂಕಿನಲ್ಲಿ ಹಣ ಇರಲಿಲ್ಲ. ಅದೇ ರೀತಿ ನನ್ನ ತಾಯಿಯ ಹೆಸರಿಗೂ ಸಹ ಯಾವುದೇ ಹಣ ಇರಲಿಲ್ಲ. ನನ್ನ

ತಂದೆಯ ಹೆಸರಿಗೆ ಬ್ಯಾಂಕಿನಲ್ಲಿ ಒಂದು ಶೇರು ಇದ್ದ ಬಗ್ಗೆ ಮಾತ್ರ ಗೊತ್ತು ಆದರೆ ಉಳಿದಂತೆ ನನಗೆ ಮಾಹಿತಿ ಇರುವುದಿಲ್ಲ.

ಸನ್ 1993 ರಲ್ಲಿ ಪಾಲು ವಾಟ್ನಿಯಾದ ನಂತರ 1 ನೇ ಪ್ರತಿವಾದಿ ತನ್ನ ಸ್ವಂತ ಉದ್ಯೋಗದಿಂದ ಬಂದ ಆದಾಯದಿಂದ ಕೆಲವು ಆಸ್ತಿಗಳನ್ನು ತನ್ನ ಹೆಸರಿಗೆ ಖರೀದಿಸಿರುತ್ತಾನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಈಗಲೂ ಸಹ ಬುಕ್ ಸ್ಟಾಲ್ ಆಂಗಡಿಯನ್ನು ನಡೆಸುತ್ತಿದ್ದಾನೆಂದರೆ ನಿಜ. ಸನ್ 2004 ರಿಂದ ಅಂದರೆ ಈಗ ಸುಮಾರು 20 ವರ್ಷಗಳಿಂದ ಸದರಿ ಅಂಗಡಿಯನ್ನು ನಡೆಸುತ್ತಾ ಬಂದಿರುತ್ತಾನೆಂದರೆ ನಿಜ. ಅದಕ್ಕಿಂತ ಮುಂಚೆ ಸುವರ್ಣಾ ಲಾಡ್ಜ ನ್ನು 1 ನೇಪ್ರತಿವಾದಿ ನೋಡಿಕೊಳ್ಳುತ್ತಿದ್ದನು ಎಂದರೆ ನಿಜ. ಸಾಕ್ಷಿ ಮುಂದುವರೆದು ನನ್ನ ತಾಂದೆ ತಾಯಿ ಅದರ ಲೆಕ್ಕ ಪತ್ರವನ್ನು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಳ್ಳುವವರೆಗೆ ಅಂದರೆ ಸನ್ 2004 ರವರೆಗೆ ಸದರಿ ಲಾಡ್ಜ ನ ಲೆಕ್ಕ ಪತ್ರವನ್ನು ನೋಡಿಕೊಳ್ಳುತ್ತಿದ್ದು, ಅವರು ತೀರಿಕೊಂಡ ನಂತರ ನಮ್ಮ ತಾಯಿ ಲೆಕ್ಕ ಪತ್ರವನ್ನು ನೋಡಿಕೊಳ್ಳುತ್ತಾ ಬಂದಿರುತ್ತಾರೆಂದು ನುಡಿಯುತ್ತಾರೆ. ಆ ಬಗ್ಗೆ ನನ್ನ ಬಳಿ ಯಾವುದೇ ಪುರಾವೆ ಇರುವುದಿಲ್ಲ. ಸದರಿ ಸುವರ್ಣಾ ಲಾಡ್ಜ ನಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ನನಗೆ ಮಾಹಿತಿ ಇಲ್ಲ. ಸದರಿ ಸುವರ್ಣಾ ಲಾಡ್ಜ ನಿಂದ ಸಾಕಷ್ಟು ಆದಾಯ ಬರುತ್ತಿತ್ತು ಎಂದರೆ ನಿಜ. 1 ನೇ ಪ್ರತಿವಾದಿ ಸಾಕಷ್ಟು ಹಣ ಹೂಡಿಕೆ ಮಾಡಿ ಲಾಡ್ಜ ನ್ನು ಅಭಿವೃದ್ಧಿಪಡಿಸಿರುತ್ತಾನೆಂದರೆ ಸಾಕ್ಷಿಯು ಆತನೇ ಮನೆಯ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದು, ಆದ್ದರಿಂದ ನಾವು ಆತನಿಗೆ ಸಹಕಾರ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ಏನು ಸಹಕಾರ ಮಾಡಿರುತ್ತೀರಿ? ಎಂದರೆ ಸಾಕ್ಷಿಯು ಆತನು ಮಾಡುವ ಪ್ರತಿಯೊಂದು ಕೆಲಸಕ್ಕೂ ಸಮ್ಮತಿ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಸನ್ 1993 ರಿಂದ ಆತನಿಗೆ ಸಹಕಾರ ಮಾಡುತ್ತಾ ಬಂದಿರುತ್ತೀರಿ? ಎಂದರೆ ಸಾಕ್ಷಿಯು ನಾನು ಆತನು ಮಾಡಿದ ಯಾವುದೇ

ವ್ಯವಹಾರದ ಬಗ್ಗೆ ನಾನು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಸನ್ 1993 ರಿಂದ ಕೆಲವು ಮನೆಗಳನ್ನು ಮಾರಾಟ ಮಾಡಿದ್ದು, ಆ ಬಗ್ಗೆ ನಾನು ಪ್ರಶ್ನಿಸಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ತಾಯಿ ಬದುಕಿದ್ದರಿಂದ ನಾನು ಪ್ರಶ್ನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸನ್ 1993 ರಲ್ಲಿ ನಿಡಿ 1 ರಂತೆ ಆದ ವಾಟ್ನಿ ಪತ್ರಕ್ಕೆ ನನ್ನ ತಂದೆ ಮತ್ತು ತಾಯಿಗೆ ಗೊತ್ತಿತ್ತು ಎಂದರೆ ಸರಿಯಲ್ಲ.

ನಿಡಿ1 ನ್ನು ಸಾಕ್ಷಿದಾರರಾದ ಆರ್.ಬಿ.ಗಣಾಚಾರಿ ಹಾಗೂ ವಂಟಮೂರಿಮಠರವರ ಸಮಕ್ಷಮ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ಸನ್ 1993 ರಲ್ಲಿ ನಿಡಿ 1 ರಂತೆ ವಾಟ್ನಿ ಆಗಿರುವ ವಿಷಯ ನನಗೆ ಗೊತ್ತಿದ್ದರೂ ಸಹ ಪ್ರತಿವಾದಿಯರಿಗೆ ವಿನಾಕಾರಣ ತೊಂದರೆ ಕೊಡುವ ಉದ್ದೇಶದಿಂದ ಖೊಟ್ಟಿ ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ-2 ನೇ ಪ್ರತಿವಾದಿಯರ ವಕೀಲರು ಪಾಟೀ ಸವಾಲಿಗೆ ಸಮಯ ಕೋರುತ್ತಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ